ವೀರಭದ್ರ ಕೌದಿ

ಕಲೆ: ಮುರಳೀಧರ ರಾಠೋಡ್

# ಮನೆ ಹೊಕ್ಕೊಳ್ಳುವುದು

ಭಾರತೀಯರ ಬದುಕಿನಲ್ಲಿ ಹಲವಾರು ಸಂಪ್ರದಾಯಗಳು ಹುಟ್ಟಿಕೊಂಡಿವೆ. ಅವುಗಳನ್ನು ದೇಶದ ತುಂಬೆಲ್ಲ ಹೆಚ್ಚಿನ ಹುರುಪಿನಿಂದ ಆಚರಿಸುತ್ತಾರೆ. 'ಲೋಕೊ ಭಿನ್ನ ರುಚಿ' ಎಂಬಂತೆ ದೇಶದ ತುಂಬೆಲ್ಲ ಅವುಗಳ ಆಚರಣೆಯ ರೀತಿ ಭಿನ್ನವಾಗಿರುವುದು ಮೇಲ್ನೋಟಕ್ಕೆ ಕಾಣಿಸುತ್ತದೆ. ನೆರೆಯ ಆಂಧ್ರ, ತಮಿಳುನಾಡು, ಕೇರಳ, ಮಹಾರಾಷ್ಟ್ರದಲ್ಲಿ ಒಂದು ರೀತಿ ಆಚರಿಸಿದರೆ ಕರ್ನಾಟಕದಲ್ಲಿ ಮತ್ತೊಂದು ರೀತಿಯಲ್ಲಿ ಆಚರಿಸುವುದನ್ನು ನೋಡಬಹುದು. ದಕ್ಷಿಣ ಕರ್ನಾಟಕದ ಆಚರಣೆಗಳಿಗಿಂತ ಉತ್ತರ ಕರ್ನಾಟಕದ ಆಚರಣೆಗಳು ಭಿನ್ನವಾಗಿರುತ್ತವೆ. ಅಷ್ಟೆ ಏಕೆ, ಉತ್ತರ ಕನಾಟಕದ ಕೆಲವು ಜಿಲ್ಲೆಗಳಲ್ಲಿ ಪ್ರಚಲಿತವಿರುವ ಆಚರಣೆ, ಸಂಪ್ರದಾಯಗಳು ಇತರ ಜಿಲ್ಲೆಗಳಲ್ಲಿ ಕಂಡುಬರುವುದಿಲ್ಲ. ಜಿಲ್ಲೆ ತಾಲ್ಲೂಕುಗಳು ಬದಲಾದಂತೆ ಆಚರಣೆಗಳೂ ಬದಲಾಗುತ್ತವೆ. ಪ್ರತಿ ಇಪ್ಪತ್ತು ಕಿಲೊಮೀಟರಿಗೆ ನಾವಾಡುವ ಭಾಷೆ (ಡೈಲೆಕ್ಟ) ಬದಲಾಗುತ್ತದೆ ಎಂದು ಭಾಷಾಶಾಸ್ತ್ರಜ್ಞರು ಹೇಳುವ ಮಾತು ಈ ಆಚರಣೆ, ಸಂಪ್ರದಾಯಗಳಿಗೂ ಅನ್ವಯಿಸುತ್ತದೆ.

ದೀಪಾವಳಿ ಹಬ್ಬದಲ್ಲಿ ಅಳಿಯನಿಗೆ (ಮಗಳ ಗಂಡ) ವಿಶೇಷ ಪ್ರಾಮುಖ್ಯತೆ. ಹಳೆಯ ಮೈಸೂರು ಭಾಗದಲ್ಲಿ ಮದುವೆಯಾದ ವರ್ಷ ಬರುವ ಮೊದಲ ದೀಪಾವಳಿಗೆ ಮಗಳು ಮತ್ತು ಅಳಿಯನನ್ನು ಆಮಂತ್ರಿಸಿ ವಿಶೇಷವಾಗಿ ಹೊಸ ಬಟ್ಟೆ ಹಾಗು ಇತರೆ ಕಾಣಿಕೆ ನೀಡಿ ಸತ್ಕರಿಸುತ್ತಾರೆ. ಉತ್ತರ ಕರ್ನಾಟಕದಲ್ಲಿ ಅಳಿಯನಿಗೆ ಇನ್ನೂ ಹೆಚ್ಚಿನ ಗೌರವ. ಆತ ಅಲ್ಲಿ 'ಅಳಿಯದೇವರು'. ಉತ್ತರ ಕರ್ನಾಟಕದ ಬಾಗಲಕೋಟೆ, ವಿಜಯಪುರ, ಯಾದಗಿರಿ, ಕಲಬುರ್ಗಿ, ರಾಯಚೂರು, ಕೊಪ್ಪಳ ಮುಂತಾದ ಜಿಲ್ಲೆಗಳಲ್ಲಿ ಅಳಿಯದೇವರು ಮೊದಲ ಸಲ ಮಾವನ ಮನೆಗೆ ಬರುವುದು ವಿಶೇಷ ಸಂಪ್ರದಾಯವೇ ಆಗಿದೆ. ಈ ಭಾಗದಲ್ಲಿ ಇದನ್ನು 'ಮನೆ ಹೊಕ್ಕೊಳ್ಳುವದು' ಎಂದು ಕರೆಯುತ್ತಾರೆ.

ಮದುವೆಯ ಸಂದರ್ಭದಲ್ಲಿ ವರನಿಗೆ ಕೊಡಬೇಕಾದ ವರದಕ್ಷಿಣೆ, ವರೋಪಚಾರದ ವಿಷಯದಲ್ಲಿ ನಡೆಯುವ ಚರ್ಚೆ, ಹಗ್ಗ ಜಗ್ಗಾಟದಂತೆ ಮನೆ ಹೊಕ್ಕೊಳ್ಳುವ ಸಂದರ್ಭದಲ್ಲೂ ಹಗ್ಗ ಜಗ್ಗಾಟ ನಡೆಯುತ್ತದೆ. ಬಟ್ಟೆ ಆಯೇರಿಯಂತೂ ಇದ್ದದ್ದೆ, ಜೊತೆಗೆ ಅಳಿಯದೇವರ ವಜನಿಗೆ ತಕ್ಕಂತೆ ಬಂಗಾರದ ಕಾಣಿಕೆಯನ್ನೂ ನೀಡಬೇಕಾಗುತ್ತದೆ. ಅದು ಒಂದು ತೊಲೆಯಿಂದ ನಾಲ್ಕೈದು ತೊಲೆಗಳಾದರೂ ಆಗಬಹುದು. ಅಳಿಯ ಕಡಿಮೆ ತೂಕದವನಾಗಿದ್ದರೆ ಅಥವಾ ಮಾವನಿಗೆ ಹೆಚ್ಚು ಕೊಡುವ ಶಕ್ತಿ ಇಲ್ಲದಿದ್ದರೆ ಅಷ್ಟೆ, ಒಂದು ಜೊತೆ ಬಟ್ಟೆ, ಅರ್ಧ ತೊಲೆ ಬಂಗಾರವಾದರೆ ಅಳಿಯದೇವರು ಶಾಂತನಾಗುತ್ತಾನೆ. 'ಮಾವ ತನ್ನ ಖುಷಿ ಇದ್ದಷ್ಟು ಕೊಟ್ಟರೆ ಸಾಕು' ಎನ್ನುವ ಮನೋಭಾವದ